ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡಗಳು
ನೃಪತುಂಗ ರಸ್ತೆ, ಬೆಂಗಳೂರು – 560 001

ಸಂಖ್ಯೆ: RMSA/104/ಹು.ಭ/2010-11

ದಿನಾಂಕ: 09.05.2011

## ಜ್ಞಾಪನ

ವಿಷಯ :– ಉನ್ನತೀಕರಿಸಿದ ಶಾಲೆಗಳ ಶಿಕ್ಷಕರ ಹುದ್ದೆಗಳನ್ನು ತುಂಬುವ ಬಗ್ಗೆ.
ಉಲ್ಲೇಖ:– ಜಿಲ್ಲೆಗಳ ಉಪಯೋಜನಾ ಸಮನ್ವಯಾಧಿಕಾರಿಗಳ ದೂರವಾಣಿ ಕರೆ.

*******

ರಾಜ್ಯದಲ್ಲಿ ಈಗಾಗಲೆ 324 ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಿದ್ದು ಈ ಶಾಲೆಗಳಿಗೆ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರ ಹುದ್ದೆಗಳನ್ನು ನೇಮಕಾತಿ ಮೂಲಕ ತುಂಬಲು ಮಾನ್ಯ ಆಯುಕ್ತರನ್ನು ಕೋರಲಾಗಿದೆ. ಈ ಹುದ್ದೆಗಳ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ.

ಮುಂದುವರೆದು ಶಿಕ್ಷಕರ ನೇಮಕಾತಿ ಆಗುವವರೆಗೆ ಶಿಕ್ಷಕರ ಸೇವೆಯನ್ನು ಬಾಹ್ಯ ಮೂಲಗಳಿಂದ ಪಡೆಯಲು ಟೆಂಡರ್ ಕರೆಯಲಾಗಿದೆ. ಈ ಮಧ್ಯೆ 2009-10 ಹಾಗೂ 2010-11 ನೇ ಸಾಲಿನಲ್ಲಿ ಮಂಜೂರಾಗಿರುವ ಉನ್ನತೀಕರಿಸಿದ ಶಾಲೆಗಳ ಶಿಕ್ಷಕರ ಹುದ್ದೆಗಳನ್ನು ಹೆಚ್ಚುವರಿ ಹುದ್ದೆಗಳ ವರ್ಗಾವಣೆ/ಸಾಮಾನ್ಯ ವರ್ಗಾವಣೆಗೆ ಖಾಲಿ ಹುದ್ದೆಗಳೆಂದು ಪರಿಗಣಿಸಬಹುದೇ ಎಂಬ ಬಗ್ಗೆ ದೂರವಾಣಿ ಕರೆಗಳು ಬರುತ್ತಿರುವುದರಿಂದ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ.

ಉನ್ನತೀಕರಿಸಿರುವ ಶಾಲೆಗಳ ಮುಖ್ಯಶಿಕ್ಷಕರ ಮತ್ತು ಸಹಶಿಕ್ಷಕರ ಹುದ್ದೆಗಳನ್ನು 2011-12 ನೇ ಸಾಲಿನ ಹೆಚ್ಚುವರಿ ಹುದ್ದೆಗಳ ವರ್ಗಾವಣೆಗಾಗಲೀ ಅಥವಾ ಸಾಮಾನ್ಯ ವರ್ಗಾವಣೆಗೆ ಆಗಲೀ ಪರಿಗಣಿಸಬಾರದೆಂದು ತಿಳಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)ರವರಿಗೆ, ಸಾರ್ವಜನಿಕ ಶಿಕ್ಷಣ ಇಲಾಖೆ, ____________ ಜಿಲ್ಲೆ ರವರಿಗೆ,
2. ಕಛೇರಿ ಪ್ರತಿ,

ಸರ್ವ ಶಿಕ್ಷಣ ಅಭಿಯಾನ
ಸ್ವೀಕೃತ ಸಂ : 32
ದಿನಾಂಕ : 10/5/2011
ಸಹಿ :

F:\RMSA\RMSA\DDPI - Letter-Circuler.doc1